ಮೈಸೂರು – ಬೆಂಗಳೂರು ಷಟ್ಪಥ ಕಾಮಗಾರಿ ವಿಳಂಬ

525 (653) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೈಸೂರು ಷಟ್ಪಥ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆಯನ್ನು ನೆರವೇರಿಸಲಾಗಿರುವುದೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿ ಇನ್ನೂ ಪ್ರಾರಂಭಗೊಂಡಿಲ್ಲದಿರಲು ಕಾರಣವೇನು;

ಇ) ಎಂದು ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುದ್ದಲಿ ಪೂಜೆ ನೆರವೇರಿಸಿರುವುದಿಲ್ಲ.

ಆ) ಷಟ್ಪಥ ರಸ್ತೆಯನ್ನು ಪಿಪಿಪಿ ಯೋಜನೆಯಡಿಯಲ್ಲಿ ಕೈಗೆತ್ತಿ ಕೊಳ್ಳಲು ಯೋಜಿಸಲಾಗಿತ್ತು, ಆದರೆ ಬೆಂಗಳೂರಿನಿಂದ – ಮದ್ದೂರುವರೆಗೆ ನಾಲ್ಕು ಪಥದ ರಸ್ತೆಯ ನಿರ್ಮಾಣವನ್ನು ಅನ್ಯೂಟಿ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ನಿರ್ವಹಣಾ ಅವಧಿಯ ದಿನಾಂಕ: 30–06–2014ರವರೆಗೆ ಇರುತ್ತದೆ. ಆದುದರಿಂದ ಷಟ್ಪಥ ರಸ್ತೆಯ ನಿರ್ಮಾಣ ಕಾಮಗಾರಿಯನ್ನು ಸಧ್ಯಕ್ಕೆ ತೆಗೆದುಕೊಳ್ಳುತ್ತಿಲ್ಲ.

ಇ) ಅನ್ವಯಿಸುವುದಿಲ್ಲ.

ಮರು ಸರ್ವೆ ಮಾಡಿದ ಪಡಿತರ ಚೀಟಿ ನೀಡುವುದು

526 (663) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಾದ್ಯಂತ 1900 ಬಿಪಿಎಲ್ ಅರ್ಹ ಪಡಿತರ ಚೀಟಿಗಳನ್ನು ಅನರ್ಹ ಎಂದು ತೆಗೆದು ಹಾಕಿರುವುದು ನಿಜವೇ;

ಆ) ಮತ್ತೆ ಮರು ಸರ್ವೇ ಮಾಡಿದಾಗ ಅದೇ 1900 ಪಡಿತರ ಚೀಟಿಗಳನ್ನು ಅರ್ಹ ಎಂದು ಪರಿಗಣಿಸಿ ಸರ್ಕಾರಕ್ಕೆ ವರದಿ ನೀಡಿರುವುದು ನಿಜವೇ;